ಜಿಲ್ಲಾ ಪಂಚಾಯತ್, ಉಡುಪಿ

**ಉಪನಿರ್ದೇಶಕರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ರಜತಾದ್ರಿ ಸಿ ಬ್ಲಾಕ್ ಮಣಿಪಾಲ ಉಡುಪಿ ಜಿಲ್ಲೆ-576104**

ದೂರವಾಣಿ ಸಂಖ್ಯೆ : 0820 2574878 e-mail ID :ddpi.edu.karudp@nic.in.

ಸಂ.ಎ2/ಪ್ರಾ.ಶಿ/ಪದವೀಧರೇತರ ಮು.ಶಿ..ಬಡ್ತಿ/2015/2015-16 ದಿನಾಂಕ:03-07-2015.

ಜ್ಞಾಪನ

ವಿಷಯ: "ಎ" ಹಾಗೂ "ಬಿ" ವಲಯದಲ್ಲಿ ತೆರವಿರುವ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರ ಹುದ್ದೆಗೆ ಬಿ & ಸಿ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರನ್ನು ವರ್ಗಾಯಿಸುವ ಬಗ್ಗೆ

ಉಲ್ಲೇಖ: 1) ಸರ್ಕಾರದ ಆದೇಶ ಸಂ. ಸಂವ್ಯಶಾಇ 1 ಶಾಸನ 2007, ಬೆಂಗಳೂರು ದಿ:01-09-2007.

**************

ವಿಷಯಕ್ಕೆ ಸಂಬಂಧಿಸಿದಂತೆ, ಎ ಹಾಗೂ ಬಿ ವರ್ಗದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಭರ್ತಿ ಮಾಡಬಹುದಾದ ಪದವೀಧರೇತರ ಮುಖ್ಯ ಶಿಕ್ಷಕರ ಹುದ್ದೆಗೆ ಬಿ ಮತ್ತು ಸಿ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪದವೀಧರೇತರ ಮುಖ್ಯ ಶಿಕ್ಷಕರಿಂದ ಕೋರಿಕೆ ವರ್ಗಾವಣೆಗೆ ಅರ್ಜಿಯನ್ನು ಕರೆಯಲಾಗಿದೆ. ಅರ್ಜಿ ಸಲ್ಲಿಕೆ ನಮೂನೆಯನ್ನು ಈ ಕಛೇರಿಯ ವೆಬ್‌ಸೈಟ್ www.ddpiudupi.in ನಲ್ಲಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಪ್ರಕಟಿಸಲಾಗಿದೆ. ಆಸಕ್ತ ಮುಖ್ಯ ಶಿಕ್ಷಕರಿಂದ ಕೋರಿಕೆ ವರ್ಗಾವಣೆ ಅರ್ಜಿಗಳನ್ನು ಕ್ಷೇತ್ರ ಶಿಕ್ಷಣಾದಿಕಾರಿಗಳು ಪಡೆದು ಪರಿಶೀಲಿಸಿ ನಿಗದಿತ ಅವಧಿಯೊಳಗೆ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

**ಮುಖ್ಯ ಶಿಕ್ಷಕರ ಹುದ್ದೆ ತೆರವಿರುವ ಎ ಮತ್ತು ಬಿ ವರ್ಗದ ಶಾಲೆಗಳ ವಿವರ:**

1) ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಉಡುಪಿ ಸೌತ್ ಒಳಕಾಡು ಉಡುಪಿ ವಲಯ.(ಎ ವರ್ಗ)
2) ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಕೋಟೇಶ್ವರ ಕುಂದಾಪುರ ವಲಯ( ಬಿ ವರ್ಗ)

**ವರ್ಗಾವಣೆ ಪ್ರಕ್ರಿಯೆಯ ವೇಳಾ ಪಟ್ಟಿ ಈ ಕೆಳಗಿನಂತಿದೆ.**

1) ಅರ್ಜಿ ಸಲ್ಲಿಸುವ ದಿನಾಂಕ: ದಿನಾಂಕ:04-07-2015 ರಿಂದ 10-07-2015 ರ ಸಂಜೆ 5.30ರ ಒಳಗೆ
2) ಕ್ಷೇತ್ರ ಶಿಕ್ಷಣಾಧಿಕಾರಿಗಳು ಅರ್ಜಿಗಳನ್ನು ಪರಿಶೀಲಿಸಿ ದೃಢೀಕರಿಸಿ ಉಪನಿರ್ದೇಶಕರಿಗೆ ಸಲ್ಲಿಸಬೇಕಾದ ದಿ:13-07-2015.
3) ಉಪನಿರ್ದೇಶಕರ ಕಛೇರಿಯಿಂದ ತಾತ್ಕಾಲಿಕ ಆದ್ಯತೆ ಪಟ್ಟಿ ಪ್ರಕಟ ದಿನಾಂಕ:14-07-2015.
4) ಶಿಕ್ಷಕರಿಂದ ಆಕ್ಷೇಪಣೆ ಸಲ್ಲಿಸಲು ಕಡೇ ದಿನಾಂಕ:15-07-2015.
5) ಅಂತಿಮ ಆದ್ಯತಾ ಪಟ್ಟಿ ಪ್ರಕಟಿಸಲು ಕೊನೆ ದಿನಾಂಕ:16-07-2015.
6) ಕೌನ್ಸೆಲಿಂಗ್ ನಡೆಯುವ ದಿನಾಂಕ:20-07-2015

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ರಜತಾದ್ರಿ ಮಣಿಪಾಲ.

ರಿಗೆ,

ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ,

# ವರ್ಗಾವಣೆ ಅರ್ಜಿ

"ಎ" ಮತ್ತು "ಬಿ" ವಲಯದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತೆರವಿರುವ ತುಂಬಬಹುದಾದ ಪದವೀಧರೇತರ ಮುಖ್ಯ ಶಿಕ್ಷಕರ ಹುದ್ದೆಗೆ ವರ್ಗಾವಣಾ ಅರ್ಜಿ

ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯ ಹೆಸರು:

ಶಾಲೆಯ ವರ್ಗ:

ವಲಯ:

ಅರ್ಜಿದಾರರ ಹೆಸರು:

ಲಿಂಗ:

ಹುದ್ದೆ:

ವಿಷಯ:

ಜನ್ಮ ದಿನಾಂಕ:

ಪದವೀಧರೇತರ ಮುಖ್ಯ ಶಿಕ್ಷಕರಾಗಿ ಸೇರಿದ ದಿನಾಂಕ:

ಪ್ರಸ್ತುತ ಶಾಲೆಯಲ್ಲಿ ಕರ್ತವ್ಯಕ್ಕೆ ಸೇರಿದ ದಿನಾಂಕ:

ಒಟ್ಟು ಮುಖ್ಯ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ ಅವಧಿ:

## ಸೇವೆ ವಿವರ(ಪದವೀಧರೇತರ ಮುಖ್ಯ ಶಿಕ್ಷಕರ ಹುದ್ದೆಗೆ ಸೇರಿದಂದಿನಿಂದ ಅನ್ವಯ)

| ಕ್ರ.ಸಂ. | ಕರ್ತವ್ಯ ನಿರ್ವಹಿಸಿದ ಶಾಲೆ | ವರ್ಗ | ಜಿಲ್ಲೆ | ತಾಲೂಕು | ಯಿಂದ ದಿನಾಂಕ | ವರೆಗೆ ದಿನಾಂಕ | ಪೂರ್ಣಗೊಳಿಸಿದ ವರ್ಷ | ವೈಟೇಜ್ |
|---|---|---|---|---|---|---|---|---|
| | | | | | | | | |
| | | | | | | | | |
| | | | | | | | | |
| | | | | | | | | |

**ಸೂಚನೆ:-** ಪೂರ್ಣಗೊಂಡ ವರ್ಷಕ್ಕೆ ಅನುಗುಣವಾಗಿ ಎ ವಲಯದ ಶಾಲೆಯಲ್ಲಿ ಕರ್ತವ್ಯ ನಿರ್ವಹಣೆಗೆ 1 ಅಂಕ, ಬಿ ವಲಯಕ್ಕೆ 1.5 ಅಂಕ ಹಾಗೂ ಸಿ ವಲಯಕ್ಕೆ 2 ಅಂಕಗಳಂತೆ ವೆಯಿಟೇಜ್ ಲೆಕ್ಕ ಹಾಕುವುದು.

ಸ್ಥಳ: ಅರ್ಜಿದಾರರ ಸಹಿ,

ದಿನಾಂಕ:

ಮೇಲಿನ ವಿವರಗಳನ್ನು ಸಂಬಂಧಿಸಿದ ಶಿಕ್ಷಕರ ಸೇವಾವಹಿಯನ್ನು ಪರಿಶೀಲಿಸಿಕೊಂಡು ಸರಿ ಇದೆ ಎಂದು ಧೃಢೀಕರಿಸುತ್ತೇನೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು,

________ ವಲಯ